ಆಗಿರತಕ್ಕಂಥ ಚರ್ಚೆಗಳೇನಿವೆ, ಹಲವಾರು ವರ್ಷಗಳ ಈ ಒಂದು ಗಣಿಗಾರಿಕೆಯ ವಿಷಯವಾಗಿ ಏನು CBI enquiry ಯೇ ಆಗಬೇಕೆಂದು ಕೇಳಿದ್ದಾರೆ, CBI enquiry ಯ ಕೆಲವು ಘಟನೆಗಳನ್ನು ನಾನು ಹೇಳಿದ್ದೇನೆ. ಈ ಸರ್ಕಾರ impartial enquiry ಗೆ ತೀರ್ಮಾನವನ್ನು ಮಾಡುತ್ತದೆ. ಅದರ ಜೊತೆಗೆ,....

ಅಧ್ಯಕ್ಷರು: ಈಗ ಮುಂಬೈ bomb blast ನಲ್ಲಿ ನಿಧನರಾದವರಿಗೆ ಈ ಸಂಜೆ 6.25ಕ್ಕೆ ಇಡೀ ದೇಶದಾದ್ಯಂತ ಎರಡು ನಿಮಿಷಗಳ ಕಾಲ ಮೌನವನ್ನು ಆಚರಣೆ ಮಾಡಬೇಕೆಂದು ಭಾರತದ ರಾಷ್ಟ್ರಪತಿಗಳು ಕರೆ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈಗ conclude ಮಾಡುತ್ತಿದ್ದೇನೆ. ಇವತ್ತೇನು ಈ ಗಣಿಗಾರಿಕೆಯ ವಿಷಯದಲ್ಲಿ ಈ ರಾಜ್ಯದ ಆಸ್ತಿಯನ್ನು, ಗಣಿಗಾರಿಕೆಯನ್ನು ಉಳಿಸತಕ್ಕಂಥದ್ದಕ್ಕೆ ಇವತ್ತು ಸದನ ಸಂಪೂರ್ಣವಾಗಿ ತೀರ್ಮಾನ ಮಾಡುವುದಿದ್ದರೆ ಇವತ್ತು ನಾನು ಬದುಕಿದ್ದೇನೆ, ಇವತ್ತು ಈ ವಿಷಯದಲ್ಲಿ ತನಿಖೆಯನ್ನು ನಡೆಸುವುದರ ಜೊತೆಗೆ ಸಂಪೂರ್ಣವಾಗಿ ಗಣಿಗಾರಿಕೆಯನ್ನು ನಿಲ್ಲಿಸತಕ್ಕಂಥದ್ದಕ್ಕೆ ಇವತ್ತು ತೀರ್ಮಾನ ಮಾಡತಕ್ಕಂಥದ್ದಕ್ಕೆ ಸದನದಲ್ಲಿ move ಮಾಡುವುದಕ್ಕೆ ನಾನು ಸಿದ್ದನಿದ್ದೇನೆ. ಕೇಂದ್ರದ ಕೆಲವು ತೊಡಕುಗಳೇನಿವೆ, ಅದನ್ನು ಬಗೆಹರಿಸಲು ಇವತ್ತು ಎಲ್ಲಾ ಸದಸ್ಯರ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಬೇಕೆಂದೇನು ಹೇಳಿದ್ದಾರೆ, ಇದರ ಬಗ್ಗೆ ನಾನು ನಾಳೆ ಪ್ರಧಾನ ಮಂತ್ರಿಗಳಿಗೂ ಒಂದು ಪತ್ರವನ್ನು ಬರೆಯುತ್ತಿದ್ದೇನೆ. ಇಲ್ಲಿ ಆಗಿರತಕ್ಕಂಥ ಎಲ್ಲಾ ಘಟನೆಗಳನ್ನು ವಿವರಿಸಿ ಈ ದೇಶದ ಗಣಿಗಾರಿಕೆ ವಿಷಯದಲ್ಲಿ ಇವತ್ತೇನು ಸ್ವೇಚ್ಛಾಚಾರವಾದ ಕೆಲಸಗಳಾಗುತ್ತಿವೆ, ಇದರ ಬಗ್ಗೆ ನಾಳೆ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆಯುವುದರ ಮುಖಾಂತರ ಇವತ್ತು ಪ್ರಮುಖವಾದ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ಎಲ್ಲಾ ವ್ಯಕ್ತಿಗಳಿಗೂ ಈ ಒಂದು ವಿಷಯದಲ್ಲಿ ಪತ್ರವನ್ನು ಬರೆದು ಎಲ್ಲರ ಸಹಕಾರವನ್ನು ಈ ಒಂದು ಹೊಸ ನೀತಿಯನ್ನು ತರತಕ್ಕಂಥದ್ದಕ್ಕೆ ತೀರ್ಮಾನ ಮಾಡತಕ್ಕಂಥದ್ದಕ್ಕೆ ಪ್ರಧಾನ ಮಂತ್ರಿಗಳಿಗೂ ನಾನು ಮನವಿ ಮಾಡುತ್ತಿದ್ದೇನೆ. ಇವತ್ತು ಸದನ ತೀರ್ಮಾನ ಮಾಡಿದರೆ, ಗಣಿಗಾರಿಕೆಯನ್ನು ನಿಲ್ಲಿಸತಕ್ಕಂಥದ್ದಕ್ಕೆ ನಾನು ತೀರ್ಮಾನವನ್ನು ಮಾಡಲಿಕ್ಕೆ ಸಿದ್ದನಿದ್ದೇನೆ. ಈಗ ಆಗಿರತಕ್ಕಂಥ ಘಟನೆಗಳ ಬಗ್ಗೆ ತನಿಖೆಯನ್ನು ನಡೆಸುತ್ತೇನೆ.

12. ಪ್ರಕಟಣೆ :

ಅಧ್ಯಕ್ಷರು: ಆಯಿತು. ಇನ್ನು, ಎರಡು ನಿಮಿಷಗಳ ಅನಂತರ ಮೌನವನ್ನು ಆಚರಿಸಿ ಅನಂತರ start ಮಾಡೋಣ. ಈಗ Bombay blast ನಲ್ಲಿ ನಿಧನರಾದವರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಬೇಕೆಂದು ವಿನಂತಿ ಮಾಡುತ್ತೇನೆ.

(ಸನ್ಮಾನ್ಯ ರಾಷ್ಟ್ರಪತಿಗಳ ಕರೆಯ ಮೇರೆಗೆ ಮುಂಬೈ bom blast ನಲ್ಲಿ ನಿಧನರಾದವರ ಗೌರವಾರ್ಥ ಸದನದ ಸದಸ್ಯರೆಲ್ಲರೂ ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಿದರು)

13. ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿ ಯವರ ಉತ್ತರ ಮುಂದುವರೆದ ಚರ್ಚೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮುಖ್ಯಮಂತ್ರಿ ಗಳಾಂಥ ಕುಮಾರಸ್ವಾಮಿಯವರು ಸವಿಸ್ತಾರವಾಗಿ ಹೇಳಿದ್ದಾರೆ. ಚೆನ್ನಾಗಿ home work ಮಾಡಿದ್ದಾರೆ. ಕೊನೆಯದಾಗಿ, ಹನುಮಂತಯ್ಯನವರ ನೆನಪು ಮಾಡಿ ತಮ್ಮ ಭಾಷಣವನ್ನು ಮುಗಿಸಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ವಿವರವಾಗಿ ಚರ್ಚೆಯಾಗಬೇಕಾಗುತ್ತದೆ. ನಾನು ಮಾತನಾಡತಕ್ಕಂಥ ಕಾಲದಲ್ಲಿ ಎಲ್ಲರೂ ಕೂಡ ನನಗೆ ಹೇಳಿದ್ದಾರೆ. ನಾವು ಆಪಾದನೆ ಮಾಡಿಲ್ಲ. ವಿಧಾನ ಪರಿಷತ್ತಿನ ಸದಸ್ಯರು, ಮಿತ್ರ ಪಕ್ಷದ ಅಧ್ಯಕ್ಷರು ಆಪಾದನೆ ಮಾಡಿದ್ದಾರೆ. ಅವರೇ ನಮ್ಮ ಜಾಗದಲ್ಲಿ ಕುಳಿತಿದ್ದರೆ ಏನು ಮಾಡುತ್ತಿದ್ದರೆಂದು ಲೆಕ್ಕ ಹಾಕಬೇಕು. ನಾವೇನು ಹೇಳಿದ್ದೇವೆ, 150 ಕೋಟಿ ರೂಪಾಯಿಗಳ ಆಪಾದನೆ ತಮ್ಮ ಮೇಲಿದೆ. ಅಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಅನ್ನತಕ್ಕಂಥ ಮಾತನ್ನು ನಾವು ಹೇಳಿದ್ದೇವೆ. ಇವತ್ತು ಜನಾರ್ಧನ ರೆಡ್ಡಿಯವರು ಒಂದೇ ಸಲ ಹೇಳಿದ್ದು ಅಲ್ಲ, ಅವರು ಪದೇ ಪದೇ ಹೇಳಿಕೆ ಕೊಟ್ಟಿದ್ದಾರೆ. ಸತತವಾಗಿ 10 ದಿವಸಗಳ ಕಾಲ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲೇ ಇದ್ದು ನಾವು ಕೇಳಲೇಬೇಕಾಗುತ್ತದೆ. ಇವತ್ತು ಗಣಿಗಾರಿಕೆ ವಿಷಯದಲ್ಲಿ ಬಹಳ ದಿವಸಗಳಿಂದ ನಡೆದು ಬಂದಂಥ ವ್ಯವಹಾರಗಳ ಬಗ್ಗೆ, ಅದರ ಬಗ್ಗೆ ಒಂದು ವಿಶೇಷವಾದಂಥ ಚರ್ಚೆಯಾಗಿದ್ದರೆ ನಾವೂ ಕೂಡ ಅದರ ಬೆಳಕು ಚೆಲ್ಲುವಂಥ ಕೆಲಸ ಮಾಡಬಹುದಾಗಿತ್ತು. ಇವತ್ತು ಒಂದೊಂದು ಹೇಳಿ, ಯಾರ ಕಾಲದಲ್ಲಿ ಹೀಗೆಲ್ಲಾ ಆಗಿದೆ ಎನ್ನುವ ರೀತಿಯಲ್ಲಿ ಬಹಳ ಚಾಣಾಕ್ಷತನದ ಉತ್ತರವನ್ನು